ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 6, January-February 2026, Pp. 6-13
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಭೂ ರಹಿತ ಕೃಷಿ ದುಡಿಮೆಗಾರರ ವಿವಿಧ ಮಗ್ಗಲುಗಳು

**ಡಾ. ಯಲ್ಲಪ್ಪ ಟಿ**
ಅಧ್ಯಾಪಕರು, ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿಸ್ತರಣಾ ಕೇಂದ್ರ ದೇವದುರ್ಗ.

**Abstract:**

*ಭಾರತ ದೇಶದಲ್ಲಿ ಶೇ.65 ರಿಂದ 70ರಷ್ಟು ಜನರು ಕೃಷಿ ಮತ್ತು ಕೃಷಿ ಸಂಬಂಧಿತ ವೃತ್ತಿಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಕೃಷಿಕ್ಷೇತ್ರದಲ್ಲಿ ದುಡಿಯುತ್ತಿರುವ ಬಹುತೇಕ ಕಾರ್ಮಿಕರು ಭೂರಹಿತರಾಗಿದ್ದಾರೆ. ಇವರು ತಮ್ಮ ಜೀವನ ನಿರ್ವಹಣೆಗಾಗಿ ಭೂಮಿಯನ್ನು ನಂಬಿರುವುದು ಕಟು ವಾಸ್ತವ. ಅಂದರೆ ಭೂಮಿಯ ಒಡೆತನ ಹೊಂದಿರುವ ಭೂಮಾಲೀಕರ ಮೇಲೆ ವಿಶ್ವಾಸ ಇಟ್ಟುಕೊಂಡು ಅವರಿಗೆ ವಿಧೇಯರಾಗಿ ಅವರ ಜಮೀನಿನಲ್ಲಿ ತಮ್ಮ ಬದುಕನ್ನು ಕಟ್ಟಿಕೊಳ್ಳುವ ಕನಸನ್ನು ಕಾಣುತ್ತಿದ್ದಾರೆ ಮತ್ತು ಕಾಣುತ್ತಲಿರುತ್ತಾರೆ. ಇಂತಹ ಕನಸುಗಳನ್ನು ಹೊತ್ತುಕೊಂಡ ಭೂ ರಹಿತ ಕೃಷಿ ದುಡಿಮೆಗಾರರು, ಭೂಮಾಲೀಕರಿಂದ ಅನುಭವಿಸುವ ನೋವು ಮತ್ತು ಸಂಕಷ್ಟಗಳನ್ನು ಈ ಲೇಖನವು ಅನಾವರಣಗೊಳಿಸುವ ಮಹತ್ವದ ಉದ್ದೇಶವನ್ನು ಹೊಂದಿರುತ್ತದೆ. ಇದು ಕರ್ನಾಟಕದ ರಾಯಚೂರು ಜಿಲ್ಲೆಯನ್ನು ಕೇಂದ್ರೀಕರಿಸಿದ ಲೇಖನವಾಗಿದ್ದು ಈ ಜಿಲ್ಲೆಯ ಭೂಮಾಲೀಕರು ಮತ್ತು ಭೂ ರಹಿತ ಕೃಷಿ ದುಡಿಮೆಗಾರರ ನಡುವಿನ ಸಂಬಂಧಗಳ ಮಧ್ಯೆ ಸಂಭವಿಸುವ ಬಿಕ್ಕಟ್ಟುಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.*

**Keywords:** *ಕೃಷಿವಲಯ, ಕೃಷಿ, ಕೂಲಿಕಾರರು, ದುಡಿಮೆಗಾರರು, ಭೂರಹಿತರು.*

**ಪೀಠಿಕೆ**

ಭೂ ರಹಿತರು ಭೂಮಿ ಇಲ್ಲದೆ ಇರುವುದರಿಂದ ತಮ್ಮ ಜೀವನ ನಡೆಸುವುದಕ್ಕಾಗಿ ಒಂದಲ್ಲ ಒಂದು ರೀತಿಯಲ್ಲಿ ದುಡಿಮೆಯನ್ನು ಅವಲಂಬಿಸಿದ್ದಾರೆ. ಬಹುಮುಖ್ಯವಾಗಿ ಭೂ ರಹಿತ ಕೃಷಿ ದುಡಿಮೆಗಾರರು ಭೂಮಿಯನ್ನು ಹೊಂದಿರುವಂತಹ ಭೂಮಾಲೀಕರ ಮತ್ತು ಮೇಲ್ವರ್ಗದವರ ಒಡೆತನದಲ್ಲಿರುವ ಭೂಮಿಗಳೇ ಇವರಿಗೆ ಆಶ್ರಯವಾಗಿದೆ. ಪುರುಷ ಕೃಷಿ ದುಡಿಮೆಗಾರರು ಒಂದು ವರ್ಷದವರಿಗೆ ಅಥವಾ ಕೆಲವು ತಿಂಗಳುಗಳಿಗೆ ಭೂಮಾಲೀಕರ ಹೊಲಗದ್ದೆಗಳಲ್ಲಿ ತಿಂಗಳಿಗೆ ಇಂತಿಷ್ಟು ಕೂಲಿಯನ್ನು ಪಡೆದುಕೊಂಡು ದುಡಿಯುತ್ತಿರುತ್ತಾರೆ. ಇಲ್ಲಿ ಪುರುಷ ಕೃಷಿ ದುಡಿಮೆಗಾರರಿಗೆ ಮಾಲೀಕರೆ ಕೂಲಿಯನ್ನು ನಿಗಧಿ ಪಡಿಸುತ್ತಾರೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಪುರುಷ ಕೃಷಿ ದುಡಿಮೆಗಾರರನ್ನು ವಿಚಾರಿಸಿದಾಗ ತಿಂಗಳಿಗೆ 12,000 ಮತ್ತು ಕೆಲವು ಭೂ ಮಾಲೀಕರು 10,000ದಂತೆ ಪುರುಷ ಕೃಷಿ ದುಡಿಮೆಗಾರರನ್ನು ಹಗಲು ರಾತ್ರಿ ಅವರ ಹೊಲಗದ್ದೆಗಳಲ್ಲಿ ದುಡಿಸಿಕೊಳ್ಳುವುದನ್ನು ಗಮನಿಸಲಾಗಿದೆ. ಭೂ ರಹಿತ ಕೃಷಿ ದುಡಿಮೆಗಾರರು ಕರ್ನಾಟಕ ಮತ್ತು ರಾಯಚೂರು ಜಿಲ್ಲೆಯಲ್ಲಿ ಆಯಾಕಟ್ಟಿನ ಅಂದರೆ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಾಗಿದ್ದು, ಮತ್ತು ಈ ಭೂ ರಹಿತ ಕೃಷಿ ದುಡಿಮೆಗಾರರನ್ನು ಸಮಾಜದ ಅತ್ಯಂತ

**Please cite this article as:** ಯಲ್ಲಪ್ಪ, ಟಿ. (2026). ಭೂ ರಹಿತ ಕೃಷಿ ದುಡಿಮೆಗಾರರ ವಿವಿಧ ಮಗ್ಗಲುಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 4(6), 6–13

ಕಡೆಯ ವರ್ಗವಾಗಿ ಪರಿಗಣಿಸುತ್ತ ಬರಲಾಗಿದೆ. ಅವರು ತಮಗೆ ಯಾವುದೇ ಜಮೀನಿಲ್ಲದೆ ಅಥವಾ ಆರ್ಥಿಕ ಸಂಪತ್ತಿನ ಮೂಲವಿಲ್ಲದೆ, ಇತರರ ಜಮೀನಿನಲ್ಲಿ ದುಡಿದು ತಮ್ಮ ಬದುಕಿನ ನಿರ್ವಹಣೆಗಾಗಿ ಹಲವಾರು ಸಂಕಷ್ಟಗಳನ್ನು ಸಹಿಸಿಕೊಂಡು ಜೀವನವನ್ನು ನಡೆಸುತ್ತಿದಾರೆ. ಕರ್ನಾಟಕ ಮತ್ತು ರಾಯಚೂರು ಜಿಲ್ಲೆಯಲ್ಲಿ ಶೇಕಡಾ 60–70ರಷ್ಟು ಜನಸಂಖ್ಯೆಯಲ್ಲಿ ಭೂ ರಹಿತ ಕೃಷಿ ದುಡಿಮೆಗಾರರಾಗಿದ್ದಾರೆ. ಇಂತಹ ಭೂ ರಹಿತ ಕೃಷಿ ದುಡಿಮೆಗಾರರು ಹವಮಾನದ ಬದಲಾವಣೆ, ಋತುಮಾನ ಸಂಬಂಧಿತ ಕೃಷಿ, ಆರ್ಥಿಕ ಅಸಮಾನತೆ, ಜಾತಿ ಮತ್ತು ಸಾಮಾಜಿಕ ಶೋಷಣೆಗಳಿಂದ ಕೂಡಿದ ಸಂಕಷ್ಟದ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಭಾರತ ಮತ್ತು ಕರ್ನಾಟಕದಲ್ಲಿ ಭೂಸ್ವಾಮ್ಯದ ಅಸಮಾನತೆಯು ಬಹಳ ಜಟಿಲಗೊಂಡಿದೆ. ಇದು ಭೂಮಿ ಉಳ್ಳವರು ಮತ್ತು ಇಲ್ಲದವರು ಎಂಬ ವರ್ಗವನ್ನು ಸೃಷ್ಟಿಸಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಭೂಮಾಲೀಕರ ಮತ್ತು ಕೂಲಿಯಾಳುಗಳ ವರ್ಗಸಂಘರ್ಷವಾಗಿದೆ. ಇದು ಆರ್ಥಿಕತೆಯ ಒಂದು ಮುಖವನ್ನು ತೋರಿಸಿದರೆ ಇನ್ನೊಂದು ಮುಖ ಜಾತಿಯ ಕಾರಣಕ್ಕಾಗಿ ಭೂಮಿಯನ್ನೇ ಹೊಂದಿಲ್ಲದಿರುವಂತ ವರ್ಗವು ಸಹ ಇದೆ. ಈ ಜಾತಿ ಕಾರಣಕ್ಕಾಗಿ ತಳವರ್ಗದ ಜನಾಂಗವು ಕೇವಲ 2 ರಿಂದ 3 ಎಕರೆಯಷ್ಟು ಭೂಮಿಯನ್ನು ಹೊಂದಿದ್ದಾರೆ. ಭಾರತ ಸರ್ಕಾರದ 2011ರ ಸೆನ್ಸಸ್ ಪ್ರಕಾರ ಭೂ ರಹಿತ ಕೃಷಿ ದುಡಿಮೆಗಾರರ ಕುಟುಂಬಗಳ ಪ್ರಮಾಣ ಶೇಕಡ 55 ರಿಂದ 60ರಷ್ಟು ಅಧಿಕ ಎಂದು ತೋರಿಸಿದೆ. ಇದು ದಿನನಿತ್ಯದ ಭೂಮಿ ಇಲ್ಲದೆ ಅತಂತ್ರವಾಗಿ ಕೇವಲ ತಮ್ಮ ದುಡಿಮೆಯ ಶಕ್ತಿಯನ್ನು ಉಪಯೋಗಿಸಿಕೊಂಡು ಕೂಲಿಯ ಆಧಾರದಲ್ಲಿ ಬದುಕು ಸಾಗಿಸುವ ಜನಸಂಖ್ಯೆ ಹೆಚ್ಚಳದ ಪ್ರಮಾಣವನ್ನು ಅನಾವರಣಗೊಳಿಸುತ್ತದೆ.

**ವೇತನ ರಹಿತ ದುಡಿಮೆ**

ಇದು ಭೂಮಾಲೀಕ ವರ್ಗ ಮತ್ತು ಶ್ರೀಮಂತರು ಭೂ ರಹಿತ ಕೃಷಿ ಕುಟುಂಬಗಳಿಗೆ ಮದುವೆ ಮುಂಜಿಗೆ ಮತ್ತು ಹಬ್ಬ ಹರಿದಿನಗಳಿಗೆ ಸಾಲಗಳನ್ನು ಕೊಟ್ಟಿರುತ್ತಾರೆ. ಇಂತಹ ಸಾಲಗಳನ್ನು ಭೂ ರಹಿತ ಕೃಷಿ ಕುಟುಂಬಗಳು ತೀರಿಸದೇ ಇದ್ದಾಗ ತಮ್ಮ ಜಮೀನುಗಳಲ್ಲಿ ಅಧಿಕ ಪ್ರಮಾಣದ ಕೆಲಸಗಳನ್ನು ಕೊಟ್ಟು ಹೆಚ್ಚಿನ ಸಮಯದವರೆಗೆ ದುಡಿಸಿಕೊಳ್ಳುವಂತಹ ಸನ್ನಿವೇಶಗಳು ಕಂಡುಬಂದಿವೆ. ಇವರು ದುಡಿಮೆ ಮಾಡುವ ಸಮಯದಲ್ಲಿ ಅವರ ಎಲ್ಲಾ ಸಾಲಗಳು ತೀರುವಂತಹ ಶ್ರಮವನ್ನು ಹಾಕಿ ದುಡಿಮೆ ಮಾಡಿದರೂ ಈ ಮಾಲೀಕ ವರ್ಗವು ನಿಮ್ಮ ಸಾಲ ಇನ್ನೂ ಬಾಕಿ ಇದೆ ಎಂದು ಹೇಳಿ ಮತ್ತಷ್ಟು ಅವರನ್ನು ಬೆತ್ತದಾಳುಗಳಂತೆ ಬಳಸಿಕೊಳ್ಳುವುದನ್ನು ನಿಲ್ಲಿಸುವುದಿಲ್ಲ. ಇಂತಹ ದುಡಿಮೆಯನ್ನು ವೇತನ ರಹಿತ ಮತ್ತು ದಬ್ಬಾಳಿಕೆಯ ದೌರ್ಜನ್ಯದ ಕ್ರೌರ್ಯವೆಂದು ಕರೆಯಬಹುದಾಗಿದೆ. ಪ್ರಸ್ತುತ ಇಂತಹ ದುಡಿಮೆಯು ರಾಯಚೂರು ಜಿಲ್ಲೆಯ ಭೂಮಾಲೀಕ ವರ್ಗ ಮತ್ತು ಜಮೀನ್ದಾರ್ ವರ್ಗ ಹಾಗೂ ಶ್ರೀಮಂತರು ತಮ್ಮ ದುಡಿಮೆಗಾರರಿಗೆ ಯಾವುದೇ ವೇತನವನ್ನು ನೀಡದೆ ಸಾಲದ ಹೆಸರು ಹೇಳಿಕೊಂಡು ಅವರ ದುಡಿಮೆಯನ್ನು ಹಾಗೂ ಅವರ ಶ್ರಮವನ್ನು ದೋಚುವ ಪ್ರಕ್ರಿಯೆಯನ್ನು ವೇತನ ರಹಿತ ದುಡಿಮೆ ಎಂದು ನಿರ್ವಚಿಸಿಕೊಳ್ಳಲಾಗಿದೆ.

**ದುಡಿಮೆಗೆ ತಕ್ಕ ವೇತನ ಇಲ್ಲದಿರುವುದು**

ಇಡೀ ಜಗತ್ತಿನಾದ್ಯಂತ ಕೂಲಿ ಅನ್ನುವುದು ಬಹಳ ತಾರತಮ್ಯತೆಯಿಂದ ಕೂಡಿರುವುದನ್ನು ಅನೇಕ ಅಧ್ಯಯನಗಳು ನಿರೂಪಿಸುತ್ತವೆ. ಉಳ್ಳವರು ಮತ್ತು ಇಲ್ಲದವರ ನಡುವಿನ ನಿರಂತರವಾದ ಸಂಘರ್ಷಕ್ಕೆ ಕಾರಣವಾದ ಪ್ರಮುಖ ಅಂಶಗಳಲ್ಲಿ ವೇತನವು ಸಹ ಒಂದಾಗಿದೆ. ಇದು ಬೇರೆ ಬೇರೆ ದೇಶಗಳಲ್ಲಿ ಬಣ್ಣಗಳ ಆಧಾರದಲ್ಲಿ ಕೂಲಿಯ ತಾರತಮ್ಯತೆ ಇದ್ದರೆ, ಅದು ಭಾರತದಲ್ಲಿ ಜಾತಿಗ್ರಸ್ಥವಾದ ಮೇಲ್ವರ್ಗದ ಹಾಗೂ

ಅತಿಹೆಚ್ಚು ಜಮೀನುಗಳನ್ನು ಹೊಂದಿರುವ ಮನಸ್ಸುಗಳು ತಳವರ್ಗದ ಜನಾಂಗಗಳನ್ನು ತಮ್ಮ ಸೇವೆಗೆ ಇರುವುದೆಂದು ಭಾವಿಸಿದಂತಿದೆ. ಚಾತುರ್ವರ್ಣ ಪದ್ಧತಿಯನ್ನು ಅನುಸರಿಸುತ್ತಿರುವ ಭಾರತವು ಅತ್ಯಂತ ತಳವರ್ಗವಾಗಿರುವ ಶೂದ್ರ ಜನಾಂಗಗಳನ್ನು ತಮ್ಮ ಸೇವಕರಂತೆ ಭಾವಿಸಿಕೊಂಡಿದ್ದಾರೆ. ಶೂದ್ರ ಜನಾಂಗದಲ್ಲಿ ಬೆರಳೆಣಿಕೆಯಷ್ಟು ಜನರು ಭೂಮಿಯನ್ನು ಹೊಂದಿರುವುದನ್ನು ಗಮನಿಸಬಹುದು. ಇಲ್ಲಿ ಬಹಳ ಗಂಭೀರವಾಗಿ ಚರ್ಚಿಸಬೇಕಾದ ಸಂಗತಿ ಎಂದರೆ ಈ ನಾಲ್ಕು ವರ್ಣಗಳಲ್ಲಿ ಅತ್ಯಂತ ಕಡೆಯದಾಗಿ ಇನ್ನೊಂದು ವರ್ಣವನ್ನು ಗುರುತಿಸಲಾಗಿದೆ. ಆ ವರ್ಣ ಯಾವುದೆಂದರೆ ಪಂಚಮ ಎಂದು ಗುರುತಿಸಿದ್ದಾರೆ. ಈ ಪಂಚಮವರ್ಗವು ಸಮಾಜದ ಅತ್ಯಂತ ಕಟ್ಟಕಡೆಯ ಸ್ಥಾನದಲ್ಲಿದೆ. ಈ ವರ್ಗವು ಈ ಮೇಲಿನ ನಾಲ್ಕು ಚಾತುರ್ವರ್ಣದ ಚಾಕರಿಕೆಯನ್ನು ಮತ್ತು ಅವರ ಸೇವೆಯನ್ನು ಮತ್ತು ಅವರ ಜಮೀನುಗಳನ್ನು ಹಾಗೂ ಅವರು ಕೊಡಮಾಡುವ ಯಾವುದೇ ಕೆಲಸಗಳನ್ನು ವಿರೋಧಿಸದೆ ಮೂಕ ಪ್ರಾಣಿಗಳಂತೆ ದುಡಿಯುವ ಅತ್ಯಂತ ಕನಿಷ್ಠ ಮಟ್ಟದ ಜೀವನವನ್ನು ಸಾಗಿಸುವಂತಹ ವರ್ಗವೆಂದರೇ ಅಥವಾ ವರ್ಣವೆಂದರೆ ಅದು ಅಸ್ಪೃಶ್ಯ ಜನಾಂಗವಾಗಿದೆ.

ಇಂತಹ ಜನಾಂಗವು ಮೇಲ್ವರ್ಗದ ಮತ್ತು ಭೂಮಾಲೀಕರ ಹಿತಾಸಕ್ತಿಗಳನ್ನು ಕಾಪಾಡುವುದು ಇವರ ಕರ್ತವ್ಯವೆಂದು ಸನಾತನವಾದಿಗಳು ನಂಬಿಸಿದ್ದಾರೆ. ಇಂತಹ ಜನಾಂಗಕ್ಕೆ ಯಾವುದೇ ಭೂಮಿ ಇಲ್ಲದೇ ಇರುವುದು ಹಾಗೂ ತಮ್ಮ ಬದುಕಿನ ಜೀವನ ನಿರ್ವಹಣೆಗಾಗಿ ಇನ್ನಿತರೆ ಯಾವುದೇ ಆರ್ಥಿಕ ಮೂಲಗಳನ್ನು ಹೊಂದಿರದೇ ಕೇವಲ ತಮ್ಮ ದೈಹಿಕ ಶ್ರಮದ ಶಕ್ತಿಯನ್ನು ನಂಬಿಕೊಂಡು ದುಡಿದು ಜೀವನ ಮಾಡುವಂತಹ ವರ್ಗವಾಗಿದೆ. ಭೂ ರಹಿತ ಕೃಷಿ ದುಡಿಮೆಗಾರರು ತಾವು ಕೇಳಿ ಪಡೆಯುವ ಕೂಲಿಯು ಕನಸಿನ ಮಾತಾಗಿದೆ. ಭೂಮಾಲೀಕ ವರ್ಗವು ಹಾಗೂ ಅಧಿಕ ಭೂಮಿಯನ್ನು ಹೊಂದಿರುವ ಜಮೀನ್ದಾರರು ಇಂತಹ ಕುಟುಂಬಗಳಿಗೆ ಅತ್ಯಂತ ಕನಿಷ್ಠ ಮಟ್ಟದ ಕಡಿಮೆ ಕೂಲಿಯನ್ನು ನೀಡಿ ದುಡಿಸಿಕೊಳ್ಳುತ್ತಾರೆ. ಸರ್ಕಾರದ ಯಾವುದೇ ಕನಿಷ್ಠ ವೇತನದ ಕೂಲಿಯನ್ನು ಇವರಿಗೆ ನೀಡುವುದಿಲ್ಲ. ಅಷ್ಟೇ ಅಲ್ಲದೆ ವೇತನದಲ್ಲೂ ಸಹ ಶ್ರೇಣಿಕೃತ ವೇತನ ಪದ್ಧತಿಯನ್ನು ಅನುಸರಿಸುತ್ತಾರೆ. ಕ್ಷೇತ್ರಕಾರ್ಯದಲ್ಲಿ ಗಮನಿಸಿದ ಸಂಗತಿ ಎಂದರೆ ಒಂದು ಪ್ರದೇಶದಲ್ಲಿ ಎರಡು ಮೂರು ರೀತಿಯಲ್ಲಿ ಕೂಲಿಯನ್ನು ಕೊಡುವುದು ಕಂಡುಬಂದಿದೆ. ಇಂತಹ ವೇತನ ತಾರತಮ್ಯವು ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿದೆ ಮತ್ತು ಈಗಲೂ ಕೂಡ ಮುಂದುವರೆದಿದೆ. ಇಂತಹ ಭೂ ರಹಿತ ಕೃಷಿ ದುಡಿಮೆಗಾರರಿಗೆ ಸರ್ಕಾರವು ನಿಗದಿ ಮಾಡಿರುವ ಕನಿಷ್ಠ ವೇತನವು ಸಹ ಕೊಡುವುದಿಲ್ಲ. ಈ ಭೂ ರಹಿತ ಕೃಷಿ ಕುಟುಂಬಗಳಲ್ಲಿಯೇ ವೇತನದ ತಾರತಮ್ಯತೆಯನ್ನು ಭೂಮಾಲೀಕರು ಸೃಷ್ಟಿ ಮಾಡಿರುತ್ತಾರೆ. ಪುರುಷ ದುಡಿಮೆಗಾರರಿಗೆ ಒಂದು ವೇತನ, ಮಹಿಳಾ ಕೃಷಿ ದುಡಿಮೆಗಾರರಿಗೆ ಮತ್ತೊಂದು ವೇತನ ನಿಗದಿ ಮಾಡಿರುತ್ತಾರೆ. ಇಲ್ಲಿ ಲಿಂಗ ಅಸಮಾನತೆಯಲ್ಲಿ ವೇತನದ ತಾರತಮ್ಯತೆಯನ್ನು ಕಾಣಬಹುದು. ಅರವತ್ತು ಎಪ್ಪತ್ತರ ದಶಕಗಳ ಹಿಂದೆ ಹೊಲಗದ್ದೆಗಳಲ್ಲಿ ಮತ್ತು ತೋಟದ ಕೆಲಸಗಾರರಿಗೆ ಸಿಗುತ್ತಿದ್ದ ಕೂಲಿ ಪುರುಷರಿಗೆ ಒಂದು ದಿನಕ್ಕೆ ಒಂದು ರೂಪಾಯಿ, ಮಹಿಳೆಯರಿಗೆ ಒಂಭತ್ತಾಣೆ. 14 ರಿಂದ 17 ವರ್ಷ ವಯಸ್ಸಿನ ಮಕ್ಕಳಿಗೆ ಆರಾಣೆ ಕೂಲಿ ಇತ್ತು(ನಾಗೇಗೌಡ, 1978). ಈ ಒಂದು ಕೂಲಿಯಲ್ಲಿಯೇ ಭೂ ರಹಿತ ಕೃಷಿ ದುಡಿಮೆಗಾರರು ತಮ್ಮ ಬದುಕನ್ನು ಕಟ್ಟಿಕೊಳ್ಳಬೇಕಾಗಿತ್ತು. ಇವರು ಭೂಮಾಲೀಕರ ಅಧೀನದಲ್ಲಿ ಮತ್ತು ಅಡಿಯಾಳಾಗಿ ಕೆಲಸ ಮಾಡುತ್ತಿದ್ದರು. ಈ ಕಾರಣದಿಂದ ಭೂಮಾಲೀಕರು ಕೊಡುವಂತಹ ಕನಿಷ್ಠ ಮಟ್ಟದ ಕೂಲಿಗೆ ದುಡಿಯಬೇಕಾದ ಅನಿವಾರ್ಯದ

ಪರಿಸ್ಥಿತಿಯು ಭೂ ರಹಿತ ಕೃಷಿ ದುಡಿಮೆಗಾರರದ್ದಾಗಿತ್ತು. ಇಂದು ಕೂಲಿಯೂ ದುಪ್ಪಟ್ಟು ಹೆಚ್ಚಾಗಿದೆ ಎಂದು ಭಾವಿಸಿದರೆ ಅದು ಕೇವಲ ಪುರುಷರಿಗೆ ದಿನಕ್ಕೆ 350, ಮಹಿಳಾ ಕೃಷಿ ದುಡಿಮೆಗಾರರಿಗೆ ಕೇವಲ 200 ರೂಪಾಯಿಗಳು ಮಾತ್ರ. ಇಂತಹ ತಾರತಮ್ಯದ ಕೂಲಿಯನ್ನು ಸಹ ಭೂ ರಹಿತ ಕೃಷಿ ದುಡಿಮೆಗಾರರ ಬದುಕಿನ ಜೀವನ ನಿರ್ವಹಣೆಗೆ ಅದು ಏನು ಕೂಡ ಸಾಕಾಗುವುದಿಲ್ಲ. ಇಂತಹ ಭೂ ರಹಿತ ಕೃಷಿ ಕಾರ್ಮಿಕರು ತಮ್ಮ ಊರುಗಳನ್ನು ಬಿಟ್ಟು ಬೇರೆ ಕಡೆ ವಲಸೆ ಹೋಗುವುದಕ್ಕೆ ಹಿಂದೇಟು ಹಾಕುತ್ತಾರೆ. ಇಂತಹ ಋತುಮಾನದ ಸಮಯದಲ್ಲಿ ಅವರು ಕೊಡುವ ಕೂಲಿಯನ್ನು ನೆಚ್ಚಿಕೊಂಡು ಜೀವನ ಮಾಡುತ್ತಾರೆ. ಭೂ ರಹಿತ ಕೃಷಿ ದುಡಿಮೆಗಾರರು ಭೂಮಾಲಿಕ ವರ್ಗದ ವಿರುದ್ಧ ಯಾವುದೇ ಧ್ವನಿ ಎತ್ತುವ ಹಾಗಿಲ್ಲ. ಏಕೆಂದರೆ ಕೆಲಸವನ್ನು ಕಳೆದುಕೊಳ್ಳುವ ಭಯ ಅವರನ್ನು ಕಾಡುತ್ತಿರುತ್ತದೆ. ಆದ್ದರಿಂದ ಅವರನ್ನೇ ನಂಬಿಕೊಂಡು ತಮ್ಮ ಬದುಕನ್ನು ತಮ್ಮ ಜೀವನವನ್ನು ಕಟ್ಟಿಕೊಳ್ಳುತ್ತಾರೆ. ಇಂಥ ಭೂ ರಹಿತ ಕೃಷಿ ಕುಟುಂಬಗಳಿಗೆ ಯಾವುದೇ ಮೂಲದ ಆದಾಯವಿರುವುದಿಲ್ಲ. ಭೂಮಾಲೀಕರು ಕೊಡುವಂತಹ ಕನಿಷ್ಠ ಕೂಲಿಯನ್ನು ಸ್ವೀಕರಿಸಲು ಸಿದ್ಧರಿರುತ್ತಾರೆ. ಈ ಎಲ್ಲಾ ಕಾರಣಗಳಿಂದಾಗಿ ಭೂ ರಹಿತ ಕೃಷಿ ದುಡಿಮೆಗಾರರು ತಮ್ಮ ದುಡಿಮೆಗೆ ತಕ್ಕ ಪ್ರತಿಫಲವಿಲ್ಲದೆ, ಅಧಿಕ ಸಮಯದ ದುಡಿಮೆಯಲ್ಲೂ ಸಹ ಕೂಲಿಯಿಂದ ವಂಚನೆಗೆ ಒಳಗಾಗುತ್ತಾರೆ. ಇಂತಹ ಮುಗ್ಧ ಭೂ ರಹಿತ ಕೃಷಿ ದುಡಿಮೆಗಾರರ ಶ್ರಮದ ವಂಚನೆಯು ಅಥವಾ ಅಧಿಕ ಸಮಯದ ದುಡಿಮೆಯು ಭೂಮಾಲೀಕರ ದಬ್ಬಾಳಿಕೆಯಿಂದ ನಡೆಯುವಂತಹದ್ದಾಗಿದೆ.

**ಗುಲಾಮ ಪದ್ಧತಿಯ ದುಡಿಮೆ**

ಈ ಗುಲಾಮ ಪದ್ಧತಿಯು ಪ್ರಪಂಚದಾದ್ಯಂತ ಕಂಡುಬರುವ ನಿಕೃಷ್ಟ ಅಮಾನವೀಯವಾದ ಪದ್ಧತಿಯಾಗಿದೆ. ಭೂಮಾಲೀಕರು ಭೂ ರಹಿತ ಕೃಷಿ ದುಡಿಮೆಗಾರರನ್ನು ಮತ್ತು ಮಹಿಳೆಯರನ್ನು ತಮ್ಮ ಜಮೀನುಗಳಲ್ಲಿ ಯಾವುದೇ ಸಮಯವನ್ನು ನಿಗಧಿ ಮಾಡದೆ ಮತ್ತು ಅವರಿಗೆ ಯಾವುದೇ ಕೂಲಿಯನ್ನು ನೀಡದೆ ಗುಲಾಮರಂತೆ ದುಡಿಸಿಕೊಳ್ಳುವ ಕ್ರಮವನ್ನು ಗುಲಾಮ ಪದ್ಧತಿ ಎಂದು ಕರೆಯಲಾಗಿದೆ. ಇಂತಹ ದುಡಿಮೆಗಾರರಿಗೆ ಭೂಮಾಲೀಕರು ಕೇವಲ ಹೊಟ್ಟೆಗೆ ಮಾತ್ರ ಅನ್ನವನ್ನು ಕೊಟ್ಟು, ಅವರನ್ನು ತಮ್ಮ ವಿರುದ್ಧ ಧ್ವನಿ ಎತ್ತದಂತೆ ದುಡಿಸಿಕೊಳ್ಳುವ ಸ್ಥಿತಿಯನ್ನು ಸೃಷ್ಟಿ ಮಾಡಿರುತ್ತಾರೆ. ಈ ಮೊದಲು ಭೂಮಾಲೀಕರ ಜಮೀನುಗಳಲ್ಲಿ ದುಡಿಯುವವರೆಲ್ಲ ಗುಲಾಮರೇ ಆಗಿದ್ದರು. ಬ್ರೆಜಿಲ್ ದೇಶದಲ್ಲಿ ಹದಿನೆಂಟನೆಯ ಶತಮಾನದ ಉತ್ತರಾರ್ಧದವರೆಗೆ ಆ ದೇಶದ ಜಮೀನುಗಳಲ್ಲಿ ಪ್ರಮುಖವಾಗಿ ಬೆಳೆಯುವ ಕಬ್ಬು ಭೂಮಾಲೀಕರ ಆದಾಯ ತರುವ ಬೆಳೆಯಾಗಿತ್ತು. ಭೂಮಾಲೀಕರು ತಮ್ಮ ಜಮೀನುಗಳಲ್ಲಿ ಭೂಮಿ ಇಲ್ಲದಂತಹ ಮತ್ತು ಜಾತಿಯಿಂದ ಅಸ್ಪೃಶ್ಯತೆಗೆ ಒಳಗಾಗಿರುವ ಜನಾಂಗಗಳೇ ಅವರಿಗೆ ಗುಲಾಮರಿಗೆ ಬಳಸಿಕೊಳ್ಳುವ ಪ್ರಮುಖ ಜನಾಂಗವಾಗಿತ್ತು. ಭಾರತದಲ್ಲಿ ಮತ್ತು ಕರ್ನಾಟಕ ಸಹ ಇಂತಹ ಗುಲಾಮರನ್ನು ಭೂಮಾಲೀಕ ವರ್ಗ ಅವಲಂಬಿಸಿತ್ತು. ರಾಯಚೂರು ಜಿಲ್ಲೆಯಲ್ಲಿಯೂ ಕೂಡ ಮೇಲ್ವರ್ಗದ ಜನಾಂಗವು ಅತ್ಯಧಿಕವಾದ ಭೂಮಿಯನ್ನು ಹೊಂದಿದೆ. ಈ ಭೂಮಾಲೀಕರಿಗೆ ಜಾತಿಯಿಂದ ಕೆಳಗಿರುವ ವರ್ಗವನ್ನು ತಮ್ಮ ಭೂಮಿಯನ್ನು ಉಳಿಮೆ ಮಾಡುವುದಕ್ಕೆ ಬಳಸಿಕೊಳ್ಳುತ್ತಿದ್ದರು. ಕಾರಣ ಈ ಜನಾಂಗವು ಭೂಮಿಯನ್ನು ಹೊಂದಿರುವುದಿಲ್ಲ. ಈ ಜನಾಂಗವು ತಮ್ಮ ಹೊಟ್ಟೆ ತುಂಬಿಸಿಕೊಳ್ಳುವುದಕ್ಕೆ ಭೂಮಾಲೀಕರು ಹೇಳಿದಂತೆ ಕೆಲಸ ಮಾಡಿಕೊಂಡು ಅವರಿಗೆ ಅಧೀನರಾಗಿ ಗುಲಾಮರಂತೆ ಬದುಕನ್ನು ನಡೆಸುತ್ತಿದ್ದಾರೆ. ಇಂತಹ ಭೂ ರಹಿತ ಕೃಷಿ ದುಡಿಮೆಗಾರರ ಬದುಕು ಕೇವಲ ತಮ್ಮ ಹೊಟ್ಟೆಯನ್ನೇ ಮಾತ್ರ ತುಂಬಿಸಿಕೊಳ್ಳುವುದರ ಜೊತೆಗೆ ಭೂಮಾಲೀಕರಿಗೆ ನಿಷ್ಠೆಯನ್ನು ತೋರಿಸುತ್ತಿದ್ದರು. ಭೂಮಾಲೀಕರು ಹೇಳುವ ಯಾವುದೇ ಕೆಲಸಗಳನ್ನು

ಮರು ಮಾತನಾಡದೆ ಅಥವಾ ಪ್ರಶ್ನಿಸದೆ ಎಲ್ಲಾ ಕೆಲಸಗಳನ್ನು ನಿಭಾಯಿಸುತ್ತಿದ್ದರು.

ಗುಲಾಮ ಪದ್ಧತಿ ಅನ್ನುವಂಥದ್ದು ಒಂದು ಸೆರೆಮನೆಯಲ್ಲಿ ಸೆರೆಯಾಳು ಇದ್ದಂತೆ. ಆ ಸೆರೆಮನೆಯಿಂದ ತಪ್ಪಿಸಿಕೊಳ್ಳಲು ಆಗದಂತೆ ಇರುವಂತಹ ಕ್ರಮ ಗುಲಾಮ ಪದ್ಧತಿ ಎನಿಸಿಕೊಳ್ಳುತ್ತದೆ. ಹಾಗೆ ಭೂ ರಹಿತ ಕೃಷಿ ದುಡಿಮೆಗಾರರು ಭೂಮಾಲೀಕರ ಗುಲಾಮಗಿರಿಯಿಂದ ತಪ್ಪಿಸಿಕೊಳ್ಳದಂತೆ ಅವರನ್ನು ಬಂಧಿಸಿ ತಮ್ಮ ಹೊಲಗದ್ದೆಗಳಲ್ಲಿ ದುಡಿಸಿಕೊಳ್ಳುವ ಹೇಯ ಕೃತ್ಯವನ್ನು ಇಲ್ಲಿ ಗುಲಾಮ ಪದ್ಧತಿ ಎಂದು ಪರಿಗಣಿಸಿಲಾಗಿದೆ. ಭೂಮಾಲೀಕರು ಇಂತಹ ಗುಲಾಮಗಿರಿಗೆ ಒಳಗಾದ ಭೂ ರಹಿತ ಕೃಷಿ ದುಡಿಮೆಗಾರರಲ್ಲಿ ಬಹುತೇಕ ಪುರುಷರು ಮತ್ತು 16 ರಿಂದ 17ರ ವಯಸ್ಸಿನ ಮಕ್ಕಳನ್ನು ತಮ್ಮ ಜಮೀನಿನ ಹೊಲಗದ್ದೆಗಳಲ್ಲಿ ತಮಗಿಷ್ಟ ಬಂದಂತೆ ದುಡಿಸಿಕೊಳ್ಳುವ ಕ್ರಮವನ್ನು ಮಾಲೀಕ ವರ್ಗವು ಅನುಸರಿಸಿಕೊಂಡು ಬಂದಿರುತ್ತದೆ. ಹಾಗೇನೆ ತಮಗೆ ಇಷ್ಟ ಬಂದ ಕೂಲಿಯನ್ನು ಅಥವಾ ಕಾಳುಕಡ್ಡಿಗಳನ್ನು ನೀಡಿ ಹೆಚ್ಚಿನ ಸಮಯದವರೆಗೆ ದುಡಿಸಿಕೊಳ್ಳುವ ಮನೋಭಾವನೆಯನ್ನು ಭೂಮಾಲೀಕ ವರ್ಗ ಹೊಂದಿರುತ್ತದೆ. ಇಂತಹ ಗುಲಾಮ ಪದ್ಧತಿಗೆ ಒಳಗಾದಂತಹ ಭೂ ರಹಿತ ಕೃಷಿ ದುಡಿಮೆಗಾರರು ತಮ್ಮ ಬದುಕಿನ ಕೊನೆಯ ಉಸಿರಿರುವವರೆಗೂ ಇಂತಹ ಸೇವೆಯನ್ನು ಭೂಮಾಲೀಕರಿಗಾಗಿ ಮುಡುಪು ಇಟ್ಟಿರುವುದನ್ನು ಕಾಣಬಹುದು. ಭಾರತಕ್ಕೆ ಸ್ವಾತಂತ್ರ ಬರುವ ಪೂರ್ವದಲ್ಲಿ ಇಂತಹ ಪದ್ಧತಿಯು ಆಚರಣೆಯಲ್ಲಿತ್ತು. ಚಾತುರ್ವರ್ಣ ವ್ಯವಸ್ಥೆಯು ಇಂತಹ ಗುಲಾಮಗಿರಿಯ ಪದ್ಧತಿಯನ್ನು ಚಾಚು ತಪ್ಪದೇ ಪಾಲಿಸಿಕೊಂಡು ಬಂದಿರುವ ಹಲವಾರು ಘಟನೆಗಳು ಇತಿಹಾಸದುದ್ದಕ್ಕೂ ಕಾಣಬಹುದು. ಈ ಗುಲಾಮ ಪದ್ಧತಿಗೆ ಒಳಗಾದಂತ ಗುಲಾಮರು ಬಹುತೇಕ ಭೂಮಾಲೀಕರ ಜಮೀನುಗಳಲ್ಲಿ ದುಡಿದು ಸತ್ತು ಹೋಗಿರುವುದನ್ನ ಇತಿಹಾಸ ಮುಚ್ಚಿಟ್ಟಿದೆ. ಈ ಭೂ ರಹಿತ ಕೃಷಿ ದುಡಿಮೆಗಾರರು ಇಂತಹ ಪದ್ಧತಿಗೆ ಒಳಗಾದಂತಹ ಸಂದರ್ಭದಲ್ಲಿ ತಮ್ಮ ಹೆಂಡತಿಯನ್ನು ಬಿಟ್ಟು ಭೂಮಾಲೀಕರ ಹೊಲಗದ್ದೆಗಳಲ್ಲಿ ದುಡಿದು ಅಲ್ಲಿಯೇ ಅವರ ಹೊಲಗಳನ್ನು ಕಾಯ್ದುಕೊಂಡು ಇರಬೇಕಿತ್ತು. ಹೆಂಡತಿಯ ಮುಖವನ್ನು ನೋಡಲು ಸಹ ಇಂತಹ ಭೂಮಾಲೀಕ ವರ್ಗವು ಗುಲಾಮ ಪದ್ಧತಿಗೆ ಒಳಗಾದಂತಹ ಮನುಷ್ಯರನ್ನು ತಮ್ಮ ಆಜ್ಞೆ ಇಲ್ಲದೆ ಅವರನ್ನು ಬಿಡುತ್ತಿರಲಿಲ್ಲ. 1947 ಆಗಸ್ಟ್ 15ರಂದು ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ ನಂತರ ಸ್ವಲ್ಪಮಟ್ಟಿಗೆ ಇಂತಹ ಗುಲಾಮ ಪದ್ಧತಿಯ ಆಚರಣೆಯು ಕಡಿಮೆಯಾದಂತೆ ಕಂಡುಬಂದರೂ ಅದು ಇನ್ನೂ ಕೆಲವು ಪ್ರದೇಶಗಳಲ್ಲಿ ಮತ್ತು ಬಲಾಢ್ಯ ಜಾತಿಗಳಿರುವ ಊರುಗಳಲ್ಲಿ ಅದು ಜೀವಂತ ಅಸ್ತಿತ್ವದಲ್ಲಿದೆ.

**ಜೀತ ಪದ್ಧತಿಯ ದುಡಿಮೆ**

ಜೀತ ಪದ್ಧತಿ ಅನ್ನುವಂಥದ್ದು ಜಾಗತಿಕವಾಗಿ ಬೇರೆ ಬೇರೆ ಆಯಾಮಗಳಲ್ಲಿ ನಡೆದುಕೊಂಡು ಬಂದಿರುವ ಅಮಾನವೀಯ ಪದ್ಧತಿಯಾಗಿದೆ. ಇಂಥ ಜೀತಗಾರಿಕ ಪದ್ಧತಿಯಲ್ಲಿ ದುಡಿಯುವಂತಹ ದುಡಿಮೆಗಾರರನ್ನು ಪ್ರಾಣಿಗಳಿಗಿಂತ ಕನಿಷ್ಠವಾಗಿ ನಡೆಸಿಕೊಂಡಿರುವುದನ್ನು ಇತಿಹಾಸದ ಪುಟಗಳಲ್ಲಿ ಗಮನಿಸಬಹುದಾಗಿದೆ. ಭೂಮಿ ಇಲ್ಲದ ಜನರು ಭೂಮಾಲೀಕರ ಮತ್ತು ಮೇಲ್ವರ್ಗದವರ ಹಿಡಿತದಲ್ಲಿರುವ ಭೂಮಿಯಲ್ಲಿ ದುಡಿಯದೇ ವಿಧಿ ಇರಲಿಲ್ಲ. ಭೂಮಿಯು ಮನುಷ್ಯನ ಆಶಯಗಳನ್ನು ಮತ್ತು ಅವನ ಬಯಕೆಗಳನ್ನು ಈಡೇರಿಸುವ ಮತ್ತು ಮನುಷ್ಯನ ಅಸ್ತಿತ್ವದ ಹಾಗೂ ಪ್ರತಿಷ್ಠೆಯ ಸರಕಾಗಿ ಭೂಮಿ ಅತ್ಯಂತ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ಎಲ್ಲಾ ಆದಿ–ಉಗಮಗಳಿಗೆ ಭೂಮಿಯೆ ಕೇಂದ್ರಬಿಂದುವಾಗಿದೆ. ಮನುಷ್ಯನು ಭೂಮಿ ಇಲ್ಲದೆ ಅಥವಾ ಭೂಮಿಯ ಮೇಲೆ ನಿಲ್ಲದೆ, ಬೇರೆ ಯಾವುದೆ ಗ್ರಹದಲ್ಲಿ ಬದುಕಲು ಅಸಾಧ್ಯವಾಗಿದೆ. ಮನುಷ್ಯನು ಎಷ್ಟೇ ಬುದ್ಧಿವಂತಿಕೆ ಮತ್ತು ತಂತ್ರಜ್ಞಾನವನ್ನು ಪ್ರವೇಶಿಸಿದರು ಹಾಗೂ

ಪ್ರಯೋಗಿಸಿದರೂ ಸಹ ಅದರ ಮೂಲ ಬೇರು ಭೂಮಿಯೇ ಆಗಿರುತ್ತದೆ. ಚಾರಿತ್ರಿಕವಾಗಿ ಗಮನಿಸಿದಾಗ ಭೂಮಿ ಅನ್ನುವಂತದ್ದು ಮನುಷ್ಯನ ಮೂಲ ನೆಲೆ 'ಭೂಮಿ' ಎಂಬುವುದು ಯಾರು ಕೂಡ ಅಲ್ಲಗಳಿಯುವಂತಿಲ್ಲ. ಇಂಥಹ ಉಪಯುಕ್ತವಾದ ಉತ್ಪಾದನಾಂಗವಾಗಿರುವ ಭೂಮಿಯು ಕೇವಲ ಕೆಲವೇ ಕೆಲವು ಜನಾಂಗದ ಸ್ವತ್ತಾಗಿ ಹೋಗಿರುವುದು ಅತ್ಯಂತ ದುರಂತದ ಸಂಗತಿ. ಹೀಗೆ ಭಾರತ ಮತ್ತು ಕರ್ನಾಟಕದಲ್ಲಿ ಭೂಮಿಯು ಕೂಡ ಏಣಿಶ್ರೇಣಿಯಂತೆ ಮತ್ತು ಜಾತಿ ವ್ಯವಸ್ಥೆಯಂತೆ ಮೇಲ್ವರ್ಗದ ಹಾಗೂ ಚಾತುರ್ವರ್ಣದ ತುತ್ತ ತುದಿಯಲ್ಲಿರುವ ಮೇಲ್ವರ್ಗಗಳಿಗೆ ಭೂಮಿಯು ಅವರ ಸ್ವತ್ತಾಗಿ ಅಧೀನಕ್ಕೆ ಒಳಪಟ್ಟಿದೆ. ಜೀತಗಾರಿಕೆಯು ಅಥವಾ ಜೀತ ಪದ್ಧತಿಯು ಬಹಳ ಹಿಂದಿನಿಂದ ಆಚರಣೆಯಲ್ಲಿತ್ತು. ಅದು ಪ್ರಸ್ತುತ ಇಂದಿಗೂ ಕೂಡ ಆಚರಣೆಯ ಸ್ವರೂಪದಲ್ಲಿ ಪಲ್ಲಟಗೊಳ್ಳುತ್ತ ಬೇರೆ ಬೇರೆ ಸ್ವರೂಪದಲ್ಲಿ ಮುಂದುವರೆದಿದೆ. ಭೂಮಾಲೀಕರ ಭೂಮಿಯಲ್ಲಿ ದುಡಿಯುವಂತಹ ಭೂರಹಿತ ಕೃಷಿ ದುಡಿಮೆಗಾರರು ಹೊಲಗದ್ದೆಗಳಲ್ಲದೇ ಭೂಮಾಲೀಕರ ಮನೆಯಲ್ಲಿಯೂ ಸಹ ದುಡಿಯಬೇಕಾಗಿತ್ತು. ಅಂದರೆ ಉಳಿಗಮಾನ್ಯಶಾಹಿ ಪದ್ಧತಿಯು ಅಸ್ತಿತ್ವದಲ್ಲಿತ್ತು. ಭೂಮಾಲೀಕರು ತಮ್ಮ ಹೊಲಗದ್ದೆಗಳಲ್ಲಿ ದುಡಿಯುವಂತಹ ಭೂ ರಹಿತ ಕೃಷಿ ದುಡಿಮೆಗಾರರನ್ನು ಪ್ರಾಣಿಗಳಂತೆ ದುಡಿಸಿಕೊಳ್ಳುತ್ತಿದ್ದರು. ದುಡಿಮೆಗಾರರಿಗೆ ಯಾವುದೇ ರೀತಿಯ ವಿಶ್ರಾಂತಿ ನೀಡದೇ ಅವರ ಬೆನ್ನ ಹಿಂದೆ ಚಾಟಿಯನ್ನು ಹಿಡಿದುಕೊಂಡು ನಿಂತಿರುತ್ತಿದ್ದರು. ಭೂಮಿ ಇಲ್ಲದಂತಹ ಜನಾಂಗವಾದ ಮತ್ತು ಅಸ್ಪೃಶ್ಯತೆಯನ್ನೇ ಅವರ ತಲೆಗೆ ಸುತ್ತಿ ಅವರನ್ನು ಗುಲಾಮರಂತೆ ಮತ್ತು ತಮ್ಮ ಸೇವಕರಂತೆ ಭೂಮಾಲೀಕ ವರ್ಗವು ಪರಿಗಣಿಸುತ್ತಿತ್ತು. ಭೂ ರಹಿತ ಕೃಷಿ ದುಡಿಮೆಗಾರರು ಬೆಳಿಗ್ಗೆ ದುಡಿಯಲು ಹೋದರೆ ಸಂಜೆ ಅಂದರೆ ಭೂಮಾಲೀಕರು ಬಿಡುವ ಬಿಡುವಿನಲ್ಲಿ ಮನೆಗೆ ಬರುತ್ತಿದ್ದರು. ಮತ್ತು ಈ ಜೀತ ಪದ್ಧತಿಯಲ್ಲಿ ದುಡಿಮೆಗೆ ಯಾವುದೇ ಸಮಯವನ್ನು ನಿಗದಿ ಮಾಡಿರಲಿಲ್ಲ. ಈ ಪದ್ಧತಿಯಲ್ಲಿ ವರ್ಷಕ್ಕೆ ಅಥವಾ ಇಂತಿಷ್ಟು ವರ್ಷಗಳಿಗೆ ಭೂ ರಹಿತ ಕೃಷಿ ದುಡಿಮೆಗಾರರನ್ನು ಒತ್ತೆ ಆಳುಗಳನ್ನಾಗಿ ಮಾಡಿಕೊಂಡು ಅವರಿಂದ ದುಡಿಸಿಕೊಳ್ಳುವುದು ಜೀತ ಪದ್ಧತಿಯ ಬಹುಮುಖ್ಯ ಅಂಶವಾಗಿದೆ. ಇಂತಹ ಜೀತ ಪದ್ಧತಿಯು ಭಾರತ ಮತ್ತು ಕರ್ನಾಟಕದಲ್ಲಿಯೂ ಸಹ ಇಂದಿಗೂ ಕೂಡ ಕಂಡುಬರುತ್ತದೆ. ಆದರೆ ಅದು ನೇರವಾಗಿ ಕಣ್ಣಿಗೆ ಕಾಣಿಸದೆ ಅಗೋಚರ ಸ್ವರೂಪದಲ್ಲಿ ನೆಲೆ ನಿಂತಿದೆ.

**ಅಭದ್ರತೆಯ ದುಡಿಮೆ**

ಭೂರಹಿತ ಕೃಷಿ ದುಡಿಮೆಗಾರರಿಗೆ ಯಾವುದೇ ತರಹದ ಭದ್ರತೆ ಇರುವುದಿಲ್ಲ. ಭೂ ರಹಿತ ಕೃಷಿ ದುಡಿಮೆಗಾರರಿಗೆ ಯಾವುದೇ ರೀತಿಯ ಕಾನೂನುಗಳು ಕೂಡ ಅನ್ವಯಿಸುವುದಿಲ್ಲ. ಇಂತಹ ಭೂ ರಹಿತ ಕೃಷಿ ದುಡಿಮೆಗಾರರು ಅಸಂಘಟಿತ ವಲಯದವರಾಗಿದ್ದು ಯಾವುದೇ ಸಂಘಗಳನ್ನು ಕಟ್ಟಿಕೊಂಡಿರುವುದಿಲ್ಲ. ರೈತರ ಪರವಾಗಿ ಹಲವಾರು ಸಂಘಟನೆಗಳು ಇವೆ. ಅಂದರೆ ಭೂಮಿಯನ್ನು ಹೊಂದಿರುವಂತಹ ರೈತರು ರೈತರ ಪರವಾಗಿ ಹೋರಾಟ ಮಾಡುವ ಸಂಘಟನೆಗಳನ್ನು ಕಟ್ಟಿಕೊಂಡು ಮತ್ತು ದೊಡ್ಡ ಭೂಮಾಲೀಕರ ಪರವಾಗಿ ಇಂತಹ ಸಂಘಟನೆಗಳು ಕೆಲಸ ಮಾಡುತ್ತವೆ. ಆದರೆ ಅವರ ಹೊಲಗದ್ದೆಗಳಲ್ಲಿ ಭೂ ರಹಿತ ಕೃಷಿ ದುಡಿಮೆಗಾರರಾಗಿ ದಿನಗೂಲಿಗಳಂತೆ ಹಾಗೂ ತಿಂಗಳಿಗೆ, ವಾರಕ್ಕೆ ಕೂಲಿಯನ್ನು ಪಡೆಯುತ್ತಿರುವವರ ಬಗ್ಗೆ ಯಾವುದೇ ಸಂಘಟನೆಗಳು ಇರುವುದಿಲ್ಲ. ಈ ದುಡಿಮೆಗಾರರು ಸಂಪೂರ್ಣವಾಗಿ ಯಾವುದೇ ಭದ್ರತೆ ಮತ್ತು ಸಂಘಟನೆಗಳ ಸಹಕಾರವು ಇವರಿಗೆ ದೊರೆಯುವುದಿಲ್ಲ. ಇವರು ತಮ್ಮ ಜೀವನ ನಡೆಸುವುದಕ್ಕಾಗಿ ಭೂಮಿ ಹೊಂದಿರುವಂತಹ ರೈತರು

ಅಥವಾ ಭೂಮಾಲೀಕರ ಜಮೀನುಗಳಲ್ಲಿ ಕೆಲಸ ಮಾಡುತ್ತಿರುತ್ತಾರೆ. ಆದ್ದರಿಂದ ಇಂತಹ ಭೂ ರಹಿತ ಕೃಷಿ ದುಡಿಮೆಗಾರರಿಗೆ ಯಾವುದೇ ಕೆಲಸದ ಭದ್ರತೆಯಾಗಲಿ ಮತ್ತು ಸವಲತ್ತುಗಳಾಗಲಿ ಇಲ್ಲವಾಗಿದೆ. ಸಂಘಟಿತ ವಲಯದಲ್ಲಿ ದುಡಿಯುವ ಕಾರ್ಮಿಕರಂತೆ ಇವರಿಗೆ ಯಾವುದೇ ರೀತಿಯ ಬೋನಸ್ ಆಗಲಿ, ಗ್ರಾಚುಟಿಗಳಾಗಲಿ ಇನ್ನಿತರದ ಸೌಲಭ್ಯಗಳಾಗಲಿ, ಭೂ ರಹಿತ ಕೃಷಿ ದುಡಿಮೆಗಾರರಿಗೆ ಸಿಗುವುದಿಲ್ಲ. ಅವಿದ್ಯಾವಂತರಾಗಿದ್ದ ಭೂ ರಹಿತ ಕೃಷಿ ದುಡಿಮೆಗಾರರಿಗೆ ಮತ್ತು ಅವರ ಮಕ್ಕಳಿಗೆ ಯಾವುದೇ ರೀತಿಯ ವಿಶೇಷ ಶಿಕ್ಷಣದ ಸವಲತ್ತುಗಳು ಕೂಡ ಇರುವುದಿಲ್ಲ. ಇಂಥ ಭೂ ರಹಿತ ಕೃಷಿ ದುಡಿಮೆಗಾರರು ತಮ್ಮ ಮಕ್ಕಳನ್ನು ಸಹ ಕೃಷಿ ಕೂಲಿ ಕೆಲಸಕ್ಕೆ ಕರೆದುಕೊಂಡು ಹೋಗುತ್ತಿದ್ದಾರೆ. ಇವರ ಮಕ್ಕಳ ಶಿಕ್ಷಣದ ಬಗ್ಗೆ ತಂದೆ ತಾಯಿಗಳು ಅಷ್ಟೇನೂ ತಲೆ ಕೆಡಿಸಿಕೊಳ್ಳುವುದಿಲ್ಲ. ಆದ್ದರಿಂದ ಇವರು ಮಕ್ಕಳು ಸಹ ಮುಂದೆ ಭೂ ರಹಿತರಾಗಿ ಕೃಷಿ ಕೂಲಿ ಮಾಡುವುದನ್ನು ಮುಂದುವರೆಸುತ್ತಾರೆ. ಇಂಥ ಭೂ ರಹಿತ ಕೃಷಿ ದುಡಿಮೆಗಾರರು ಯಾವುದೇ ಭದ್ರತೆಗಳಿಲ್ಲದೆ ಭೂಮಾಲೀಕರ ಭೂಮಿಯಲ್ಲಿ ದುಡಿಯುವಾಗ ಯಾವುದೇ ಅನಾಹುತಗಳು ಮತ್ತು ಅಪಘಾತದಂತಹ ಘಟನೆಗಳು ಘಟಿಸಿದರೂ ಭೂಮಾಲೀಕರು ಇವರಿಗೆ ಯಾವುದೇ ರೀತಿಯ ಸೂಕ್ತವಾದ ಪರಿಹಾರ ನೀಡುವುದಿಲ್ಲ. ಮತ್ತು ಕನಿಷ್ಠ ಮಟ್ಟದ ಕೂಲಿಯನ್ನು ನೀಡದೆ ಇರುವುದರಿಂದ ಇವರ ಜೀವನ ಹೆಚ್ಚು ಅಪಾಯದ ಸನ್ನಿವೇಶಕ್ಕೆ ಒಳಪಟ್ಟಿರುತ್ತದೆ. ಅಲ್ಲದೆ ಯಾವುದೇ ಸಾಮಾಜಿಕ ಭದ್ರತೆ ಇಲ್ಲದೆ, ಶೈಕ್ಷಣಿಕ ಭದ್ರತೆ ಇಲ್ಲದೆ, ಜೀವನದ ಭದ್ರತೆ ಇಲ್ಲದೆ ಮತ್ತು ಉದ್ಯೋಗದ ಭದ್ರತೆ ಇಲ್ಲದೆ ದುಡಿಯಬೇಕಾದ ಸಂಕಷ್ಟದ ಸ್ಥಿತಿಯಲ್ಲಿ ಇವರ ಬದುಕೇ ಮುಗಿದು ಹೋಗುತ್ತದೆ.

**ಗುತ್ತಿಗೆ ಪದ್ಧತಿಯ ದುಡಿಮೆ.**

ಭೂ ರಹಿತ ಕೃಷಿ ದುಡಿಮೆಗಾರರು ಕೆಲವು ಮಧ್ಯವರ್ತಿಗಳಿಂದ ಕೆಲಸಗಳನ್ನು ಹುಡುಕಿಕೊಂಡು ಬೇರೆ ಕಡೆ ದುಡಿಮೆ ಮಾಡಲು ಹೋಗುತ್ತಾರೆ. ಈ ಮಧ್ಯವರ್ತಿಗಳು ಭೂಮಾಲೀಕರಿಂದ ಹೆಚ್ಚಿನ ರೀತಿಯಲ್ಲಿ ಗುತ್ತಿಗೆಗೆ ಪಡೆದುಕೊಂಡು ಭೂ ರಹಿತ ಕೃಷಿ ದುಡಿಮೆಗಾರರಿಗೆ ಕಡಿಮೆ ಬೆಲೆಗೆ ಗುತ್ತಿಗೆಯನ್ನು ಕೊಟ್ಟು ಮೋಸ ಮಾಡುವಂತಹ ಸನ್ನಿವೇಶಗಳು ಕಂಡುಬಂದಿವೆ. ಭೂಮಾಲೀಕರಿಗೆ ಬೇಕಾಗುವಂತ ಕೂಲಿ ಆಳುಗಳನ್ನು ಸರಬರಾಜು ಮಾಡುವಂತಹ ಕೆಲವು ಮಂದಿ ಗುತ್ತಿಗೆದಾರರು ಮಧ್ಯವರ್ತಿಗಳಾಗಿ ಕೆಲಸ ಮಾಡುತ್ತಿರುತ್ತಾರೆ. ಇಂತಹ ಸಂದರ್ಭದಲ್ಲಿ ಭೂ ರಹಿತ ಕೃಷಿ ದುಡಿಮೆಗಾರರು ತಮಗೆ ನ್ಯಾಯಯುತವಾಗಿ ಸಿಗಬೇಕಾದ ಕೂಲಿಯು ಸಿಗದೆ ಅವರು ಕೊಡುವಷ್ಟು ಕೂಲಿಯನ್ನು ಪಡೆಯುತ್ತಾರೆ. ಇಂತಹ ಗುತ್ತಿಗೆ ಪದ್ಧತಿಯ ಸಂದರ್ಭದಲ್ಲಿ ಭೂ ರಹಿತ ಕೃಷಿ ದುಡಿಮೆಗಾರರು ತಮ್ಮ ಶ್ರಮದ ಜೊತೆಗೆ ಕೂಲಿಯಲ್ಲಿ ಮೋಸ ಹೋಗುವುದು ಸಾಮಾನ್ಯವಾಗಿದೆ. ಕೆಲವೊಂದು ಸಂದರ್ಭದಲ್ಲಿ ಭೂ ರಹಿತ ಕೃಷಿ ದುಡಿಮೆಗಾರರೆಲ್ಲಾ ಸೇರಿ ತಾವೇ ಭೂಮಾಲೀಕರಿಂದ ಬೆಳೆದ ಬೆಳೆಯನ್ನು ಕಟಾವು ಮಾಡಲು ಎಕರೆಗೆ ಇಂತಿಷ್ಟು ಎಂದು ನಿಗದಿ ಪಡಿಸುತ್ತಾರೆ. ತಾವೇ ನಿಗದಿ ಮಾಡಿಕೊಂಡು ಪಡೆದಿರುವ ಗುತ್ತಿಗೆಯಲ್ಲಿ ಭೂ ರಹಿತ ಕೃಷಿ ದುಡಿಮೆಗಾರರಿಗೆ ಅಧಿಕಮಟ್ಟದ ಕೂಲಿಯು ಸಿಗುತ್ತದೆ. ಇಂತಹ ಗುತ್ತಿಗೆಯಿಂದ ಭೂ ರಹಿತ ಕೃಷಿ ದುಡಿಮೆಗಾರರಿಗೆ ದಿನಕ್ಕೆ 500 ರಿಂದ 600ರವರೆಗೆ ಕೂಲಿಯನ್ನು ಪಡೆದುಕೊಳ್ಳುತ್ತಾರೆ. ಆದರೆ ಇಂಥ ಗುತ್ತಿಗೆಯು ಬಹಳಷ್ಟು ಸಲ ಅವರಿಗೆ ಸಿಗುವುದಿಲ್ಲ. ಏಕೆಂದರೆ ಇಂತಹ ಗುತ್ತಿಗೆಯನ್ನು ಭೂಮಾಲೀಕರು ಕೊಡಲು ನಿರಾಕರಿಸುತ್ತಾರೆ. ಭೂಮಾಲೀಕರು ಕಡಿಮೆ ಕೂಲಿಗೆ ಕೆಲಸ ಮಾಡಿಸಿಕೊಂಡು ಅಧಿಕ ಲಾಭವನ್ನು ಪಡೆದುಕೊಳ್ಳುವ ಲಾಭಕೋರತನದಿಂದ ಇಂತಹ ಭೂರಹಿತ ಕೃಷಿ ದುಡಿಮೆಗಾರರು ಸ್ವತ ತಾವೇ ಗುತ್ತಿಗೆ

ಪಡೆದುಕೊಳ್ಳುವುದನ್ನು ಒಪ್ಪುವುದಿಲ್ಲ. ಆದ್ದರಿಂದ ಭೂಮಾಲೀಕರು ಮಧ್ಯವರ್ತಿಗಳ ಸಹಾಯದಿಂದ ಕೂಲಿಯಾಳುಗಳು ದೊರೆಯದೆ ಇರುವ ಸಂದರ್ಭದಲ್ಲಿ ಗುತ್ತಿಗೆಗೆ ಕೊಡುತ್ತಾರೆ. ಇಂತಹ ಗುತ್ತಿಗೆ ಪದ್ಧತಿಯಿಂದ ಭೂ ರಹಿತ ಕೃಷಿ ದುಡಿಮೆಗಾರರು ಕೂಲಿಯಿಂದ ಮತ್ತು ಮಧ್ಯವರ್ತಿಗಳಿಂದ ಮೋಸ ಹೋಗುವ ಸನ್ನಿವೇಶಗಳು ಹೆಚ್ಚಾಗಿ ಕಂಡುಬರುತ್ತವೆ. ಇಂತಹ ಗುತ್ತಿಗೆ ಪದ್ಧತಿಯು ಸಹ ಭೂ ರಹಿತ ಕೃಷಿ ದುಡಿಮೆಗಾರರ ಬದುಕಿನ ಮೇಲೆ ಹಲವಾರು ರೀತಿಯ ವ್ಯತಿರಿಕ್ತವಾದ ಪರಿಣಾಮಗಳನ್ನು ಉಂಟುಮಾಡುತ್ತವೆ.

ಹೀಗೆ ಹಲವಾರು ಬಗೆಯಲ್ಲಿ ಭೂ ರಹಿತ ಕೃಷಿ ದುಡಿಮೆಗಾರರ ಚಾರಿತ್ರಿಕವಾದ ದುಡಿಮೆಯ ಸ್ವರೂಪಗಳನ್ನು ಈ ಮೇಲಿನ ಎಲ್ಲ ಸಂಗತಿಗಳು ನಿರೂಪಿಸುತ್ತವೆ. ಹೀಗೆ ಭೂರಹಿತ ಕೃಷಿ ದುಡಿಮೆಗಾರರು ತಮ್ಮ ಬದುಕಿನ ಜೀವನ ನಿರ್ವಹಣೆಗಾಗಿ ಯಾವುದೇ ರೀತಿಯ ಕೌಶಲ್ಯವಿಲ್ಲದೆ ಭೂಮಾಲೀಕರ ದೌರ್ಜನ್ಯ, ದಬ್ಬಾಳಿಕೆಗೆ ಒಳಗಾಗುತ್ತಾ ಬಂದಿದ್ದಾರೆ. ಭೂ ರಹಿತ ಕೃಷಿ ದುಡಿಮೆಗಾರರನ್ನು ಮನುಷ್ಯರಂತೆ ಪರಿಗಣಿಸದೆ ಅವರು ಇರುವುದೇ ದುಡಿಮೆ ಮಾಡುವುದಕ್ಕೆ ಅನ್ನುವ ಮನೋಭಾವನೆ ಭೂಮಾಲೀಕರ ಮನಸ್ಸಿನಲ್ಲಿರುವುದು ಕಂಡುಬರುತ್ತದೆ. ಭೂ ರಹಿತ ಕೃಷಿ ದುಡಿಮೆಗಾರನ್ನು ಕೇವಲ ಒಂದು ವಸ್ತುವಿನಂತೆ ತಮಗೆ ಇಷ್ಟ ಬಂದಂತೆ ಉಪಯೋಗಿಸಿಕೊಳ್ಳುವುದು, ತಮಗೆ ಇಷ್ಟಬಂದ ಕೂಲಿಯನ್ನು ಕೊಡುವುದು ಮತ್ತು ತಮ್ಮ ಇಷ್ಟದ ಪ್ರಕಾರ ಕೆಲಸದಿಂದ ತೆಗೆಯುವುದು ಭೂಮಾಲೀಕರ ಖುಷಿಯಾಗಿರುತ್ತದೆ. ಇದು ಭೂಮಾಲೀಕರ ಮನಸ್ಥಿತಿಯಾಗಿರುತ್ತದೆ. ಆದ್ದರಿಂದ ಭೂ ರಹಿತ ಕೃಷಿ ದುಡಿಮೆಗಾರರು ಬದುಕುವುದಕ್ಕೆ ಅವಕಾಶ ಮಾಡಿಕೊಡುವುದು ಮತ್ತು ಅವರು ಕೂಡ ಮನುಷ್ಯರಂತೆ ಅನ್ನುವ ಸಂಗತಿಯನ್ನು ತಿಳಿದುಕೊಂಡು ಭೂಮಾಲೀಕರು ವರ್ತಿಸಬೇಕಾಗಿದೆ. ಇಂತಹ ಕಠಿಣವಾದ ಪರಿಸ್ಥಿತಿಯನ್ನು ಎದುರಿಸುತ್ತಿರುವ ಭೂ ರಹಿತರ ಪರವಾಗಿ ಸರ್ಕಾರಗಳು ವಿಶೇಷವಾದ ಗಮನವನ್ನು ಹರಿಸಬೇಕಾಗುತ್ತದೆ.

**ಪರಾಮರ್ಶನ ಗ್ರಂಥಗಳು**


- ಚಂದ್ರಪೂಜಾರಿ, ಎಂ. (2018). *ಅಭಿವೃದ್ಧಿ ಪರಿಭಾಷೆ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
- ಚಂದ್ರಶೇಖರ, ಟಿ. ಆರ್. (2010). *ಧರೆ ಹತ್ತಿ ಉರಿದರೆ–ಪ್ರಚಲಿತ ಕರ್ನಾಟಕ ಕುರಿತ ಬರಹಗಳು.* ಪಲ್ಲವ ಪ್ರಕಾಶನ.
- ಚಂದ್ರಶೇಖರ, ಟಿ.ಆರ್. (1993). ಅಭಿವೃದ್ಧಿ ಮೀಮಾಂಸೆ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಕಾರ್ಲ್‌ಮಾರ್ಕ್ಸ್. (1818). *ದಾಸ ಕ್ಯಾಪಿಟಲ್.* Google Searchನಲ್ಲಿ ಬಳಸಿಕೊಳ್ಳಲಾಗಿದೆ.
- ನಾಗೇಗೌಡ, ಎಚ್.ಎಮ್. (1978). *ಬೆಟ್ಟದಿಂದ ಬಟ್ಟಲಿಗೆ ಅಥವಾ ಕಾಫಿ ಕಥೆ.* ” ಸಾಹಿತ್ಯ ಸದನ ಪ್ರಕಾಶನ,
- ರಾಯಚೂರು ಸಾಂಖ್ಯಿಕ ಇಲಾಖೆ: 2018–19 ಅಂಕಿಅಂಶಗಳ ವಿವರ, ಸಾಂಖ್ಯಿಕ ನಿರ್ದೇಶನಾಲಯ, ರಾಯಚೂರು.